# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ

ಎ.ವಿಲೇ.ನಂ.ಕಂ.ಪಹಣಿ.ಅಪೀಲು:273/2012-13 ದಿನಾಂಕ:07.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

**ವಾದಿಗಳು: ಶ್ರೀ/ ಶ್ರೀಮತಿ**

1. ನಿಂಗಪ್ಪ ತಂದೆ ಮೋಟಯ್ಯ,
2. ನಿಂಗಮ್ಮ ಗಂಡ ಹೆಗ್ಗಜರ ನಿಂಗಪ್ಪ,
   **ಉಭಯರ ವಾಸ:** ಲೋಕಿಕೆರೆ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

**[ಶ್ರೀ ಬಿ.ನಾಗರಾಜ, ವಕೀಲರು, ಕೂಡ್ಲಿಗಿ ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಚನ್ನಬಸಪ್ಪ ತಂದೆ ಲೇಟ್ ಲಿಂಗಪ್ಪ,
2. ಮಂಜುನಾಥ ತಂದೆ ಲೇಟ್ ಲಿಂಗಪ್ಪ,
3. ಪಾರ್ವತಮ್ಮ ಗಂಡ ಲೇಟ್ ಕರಿಬಸಪ್ಪ,
   **ಮೇಲಿನ ಎಲ್ಲರ ವಾಸ:** ಲೋಕಿಕೆರೆ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.
4. ಕಂದಾಯ ನಿರೀಕ್ಷಕರು, ಹೊಸಹಳ್ಳಿ.
5. ತಹಶೀಲ್ದಾರರು, ಕೂಡ್ಲಿಗಿ.

********

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಹೊಸಹಳ್ಳಿ | ಲೋಕಿಕೆರೆ | 177 | 02 ಎಕರೆ 40 ಸೆಂಟ್ಸ್ |

**ಪೀಠಿಕೆ:**

ಕೂಡ್ಲಿಗಿ ತಾಲೂಕು ಹೊಸಹಳ್ಳಿ ಹೋಬಳಿ ಲೋಕಿಕೆರೆ ಗ್ರಾಮದ ಸ.ನಂ.177 ವಿಸ್ತೀರ್ಣ:02 ಎಕರೆ 40 ಸೆಂಟ್ಸ್; ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಹೊಸಹಳ್ಳಿ ಇವರ ಹಕ್ಕು ಬದಲಾವಣೆ ಆದೇಶ ಸಂಖ್ಯೆ:29/2000-01 ದಿನಾಂಕ:02.06.2001 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಮೇಲ್ಮನವಿಯನ್ನು ವಾದಿಪರ ವಕೀಲರು ದಿನಾಂಕ:14.03.2013 ರಂದು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ಅಪೀಲು ಸಲ್ಲಿಸುವಲ್ಲಿ ಆಗಿರುವ ವಿಳಂಬವನ್ನು ಮನ್ನಾ ಮಾಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:21.05.2013 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಿಚಾರಣೆ ಪ್ರಾರಂಭಿಸಿದಾಗಿನಿಂದ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿದ್ದು, ಪ್ರಕರಣದಲ್ಲಿ ಆಸಕ್ತಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಆದುದರಿಂದ, ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ. (dismissed for default).

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]**
**ಸಹಾಯಕ ಆಯುಕ್ತರು,**
**ಹೊಸಪೇಟೆ.**

ವಾದಿ : ಪ್ರತಿವಾದಿಗಳಿಗೆ

**ಪ್ರತಿಯನ್ನು:** ತಹಶೀಲ್ದಾರರು, ಹಗರಿಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.